# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ<br>(ಪದವೀಧರರ ಚುನಾವಣೆ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 20(23) |
| ಉತ್ತರಿಸಬೇಕಾದ ದಿನಾಂಕ | 27.01.2026 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯದ ನಗರಸಭೆ ವ್ಯಾಪ್ತಿಯ ವಾರ್ಡ್ 03ರ ಕೆರೆ ಅಂಗಳದ ಕೆ.ಎಚ್.ಬಿ (ಮಹಾರಾಜ) ಬಡಾವಣೆಗೆ ಕಾವೇರಿ ಕುಡಿಯುವ ನೀರು ಸರಬರಾಜು ಸಂಪೂರ್ಣವಾಗಿ ಇಲ್ಲದಿರುವುದು ಹಾಗೂ ಯುಜಿಡಿ, ಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಬಂದಿದ್ದಲ್ಲಿ, ಕಾವೇರಿ ಕುಡಿಯುವ ನೀರು ಪೂರೈಕೆ ಮಾಡುವ ಸಂಬಂಧ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಮೀಸಲಿಟ್ಟಿರುವ ಹಣ ಎಷ್ಟು; ಯಾವ ಯೋಜನೆಯಡಿ ಅನುದಾನ ಒದಗಿಸಲಾಗುತ್ತಿದೆ; (ವಿವರ ನೀಡುವುದು); | ಮಂಡ್ಯದ ನಗರಸಭೆ ವ್ಯಾಪ್ತಿಯ ವಾರ್ಡ್ 03ರ ಕೆರೆ ಅಂಗಳದ ಕೆ.ಎಚ್.ಬಿ(ಮಹಾರಾಜ) ಬಡಾವಣೆಗೆ ಕಾವೇರಿ ಕುಡಿಯುವ ನೀರು ಸರಬರಾಜು ಮಾಡಲು ಬಡಾವಣೆಯ ಸರ್ವೇ ಕಾರ್ಯ ಕೈಗೊಂಡು, ನೀರು ಸರಬರಾಜು ಕೊಳವೆಗಳನ್ನು ವಿನ್ಯಾಸಿಸಿ, ಪ್ರಸ್ತುತ ಮನೆಗಳು ನಿರ್ಮಾಣಗೊಂಡಿರುವ ರಸ್ತೆಗಳಲ್ಲಿ ಮಾತ್ರ ಸುಮಾರು 8.5 ಕಿ.ಮೀ ಉದ್ದದ ನೀರು ಸರಬರಾಜು ಕೊಳವೆಗಳನ್ನು ಅಳವಡಿಸಲು ಹಾಗೂ ಹಾಲಿ 4.75 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟ ಜಲಸಂಗ್ರಹಾಗಾರದ ಸ್ಥಿತಿ ಪರಿಶೀಲನೆ ಮಾಡುವ ಕಾಮಗಾರಿಯ ಅಂದಾಜನ್ನು ರೂ.112.50 ಲಕ್ಷಗಳಿಗೆ ಮಂಡಳಿ ವತಿಯಿಂದ ತಯಾರಿಸಲಾಗಿರುತ್ತದೆ.<br><br>ಸದರಿ ಬಡಾವಣೆಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು 2025-26ನೇ ಸಾಲಿನ 15ನೇ ಹಣಕಾಸು ಯೋಜನೆ ನಿರ್ಬಂಧಿತ ಅನುದಾನದಡಿಯಲ್ಲಿ ಅನುಮೋದನೆಯಾಗಿದ್ದು, ಅನುದಾನ ಬಿಡುಗಡೆಯಾದ ನಂತರ ಮುಂಗಡವನ್ನು ಠೇವಣೀಕರಿಸಲಾಗುವುದು ಹಾಗೂ ಮೂಲಭೂತ |

| | | |
|---|---|---|
| | | ಸೌಕರ್ಯವಾದ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಪೌರಾಯುಕ್ತರು, ನಗರಸಭೆ, ಮಂಡ್ಯ ಇವರು ಕೋರಿದ್ದು, ಪ್ರಸ್ತುತ, ಪ್ರಾರಂಭಿಕ ಮೊತ್ತವಾಗಿ ರೂ.12.48 ಲಕ್ಷಗಳನ್ನು ದಿನಾಂಕ:10.01.2026 ರಂದು ಮಂಡಳಿಗೆ ಠೇವಣೀಕರಿಸಿರುತ್ತಾರೆ.<br><br>ಬಾಕಿ ಮೊತ್ತ ರೂ.100.02 ಲಕ್ಷಗಳನ್ನು ಮಂಡಳಿಗೆ ಠೇವಣೀಕರಿಸಿದ ನಂತರ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು. |
| (ಇ) | ಈ ವಾರ್ಡ್ ವ್ಯಾಪ್ತಿಯಲ್ಲಿ ಯುಜಿಡಿ, ಚರಂಡಿ, ವಿದ್ಯುತ್ ಸೇರಿದಂತೆ ಅನೇಕ ಮೂಲಸೌಕರ್ಯಗಳ ವ್ಯವಸ್ಥೆ ಸರಿಯಿಲ್ಲದಿರುವುದರಿಂದ ಇಲ್ಲಿನ ನಿವಾಸಿಗಳಿಗೆ ತೀವ್ರ ತೊಂದರೆ ಆಗುತ್ತಿದ್ದು, ಸರಿಪಡಿಸಲು ಅಥವಾ ಕಲ್ಪಿಸಲು ಸರ್ಕಾರದ ಕ್ರಮವೇನು: (ಸಂಪೂರ್ಣ ಮಾಹಿತಿ ನೀಡುವುದು); | ಮಂಡ್ಯ ನಗರ ಸಭೆಯ ವ್ಯಾಪ್ತಿಯ ವಾರ್ಡ್ 3ರಲ್ಲಿ ಅವಶ್ಯಕ ಭೀದಿ ದೀಪಗಳನ್ನು ನಗರ ಸಭಾವತಿಯಿಂದ ಅಳವಡಿಸಲಾಗಿದೆ ಹಾಗೂ ಮಂಡ್ಯ ನಗರಸಭೆಗೆ ಸರ್ಕಾರದಿಂದ ಹಂಚಿಕೆಯಾಗುವ SFC ಮುಕ್ತ ನಿಧಿ ಅನುದಾನ, SFC ಕುಡಿಯುವ ನೀರು ಅನುದಾನ ಮತ್ತು SFC ವಿಶೇಷ ಅನುದಾನದಡಿ ಮೂಲಭೂತ ಕಾಮಗಾರಿಗಳನ್ನು ಹಾಗೂ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಅದ್ಯತೆ ಮೇರೆಗೆ ಕೈಗೆತ್ತಿಗೊಂಡು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮ ಕೈಗೊಳ್ಳಲಾಗುವುದು. |
| (ಈ) | ಈ ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ನಿವೇಶನ, ಮೀಸಲಿಟ್ಟ ಉದ್ಯಾನ ಸೇರಿದಂತೆ ವಾರ್ಡ್ ಪೂರ್ತಿ ಜಂಗಲ್(ಗಿಡ-ಗಂಟಿ) ವ್ಯಾಪಿಸಿ ಅಪರಾಧ ಕೃತ್ಯಗಳಿಗೆ ಕಾರಣವಾಗುತ್ತಿದ್ದು; ಖಾಲಿ ನಿವೇಶನಗಳಲ್ಲಿನ ಜಂಗಲ್ ತೆರವುಗೊಳಿಸುವಿಕೆ ಹಾಗೂ ಉದ್ಯಾನ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು? | |

ಸಂಖ್ಯೆ : ನಅಇ 07 ಯುಎಂಎಸ್ 2026

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು